# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 322
ಸದಸ್ಯರ ಹೆಸರು : ಶ್ರೀ ಗೋವಿಂದರಾಜು
ಉತ್ತರಿಸುವ ದಿನಾಂಕ : 19-07-2024.
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು.

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr>
<td>ಅ)</td>
<td>ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುವ ಕೇಂದ್ರ ಪರಿಹಾರ ಕೇಂದ್ರ, ಸುಮ್ಮನಹಳ್ಳಿ, ಇದು ಒಟ್ಟು ಎಷ್ಟು ಎಕರೆ ಪ್ರದೇಶವನ್ನು ಹೊಂದಿದೆ; ಈ ಜಾಗದಲ್ಲಿ ನಡೆಯುತ್ತಿರುವ ಚಟುವಟಿಕೆಗಳೇನು; ಇರುವಂತಹ ಜಾಗದಲ್ಲಿ ಯಾವುದಾದರೂ ಸಂಘ ಸಂಸ್ಥೆ ಅಥವಾ ಎನ್‌ಜಿಒ ಗಳಿಗೆ ಇಂತಿಷ್ಟು ಅವಧಿಗೆಂದು ಜಮೀನನ್ನು ಗುತ್ತಿಗೆಗೆ ನೀಡಲಾಗಿದೆಯೇ; ನೀಡಿದ್ದಲ್ಲಿ, ಇದರ ಒಟ್ಟು ವಿಸ್ತೀರ್ಣವೆಷ್ಟು; ಈ ಸಂಸ್ಥೆಯ ಪೂರ್ಣ ವಿವರ ಹಾಗೂ ಸರ್ಕಾರ ನಿಗದಿಪಡಿಸಿರುವ ಹಣವೆಷ್ಟು;</td>
<td>ಸಮಾಜ ಕಲ್ಯಾಣ ಇಲಾಖಾ ವ್ಯಾಪ್ತಿಯಡಿ ಕಾರ್ಯನಿರ್ವಹಿಸುತ್ತಿರುವ ಕೇಂದ್ರ ಪರಿಹಾರ ಸಮಿತಿ ಅಧೀನದಲ್ಲಿ ಬೆಂಗಳೂರು ನಿರಾಶ್ರಿತರ ಪರಿಹಾರ ಕೇಂದ್ರವು ಕಾರ್ಯನಿರ್ವಹಿಸುತ್ತಿದೆ. ಇದರ ವ್ಯಾಪ್ತಿಯಲ್ಲಿ ಒಟ್ಟು 308.03 ಎಕರೆ ಜಮೀನು ಇದ್ದು, ಅದರಲ್ಲಿ ವಿವಿಧ ಇಲಾಖೆ/ ಸಂಸ್ಥೆಗಳಿಗೆ ವರ್ಗಾವಣೆ ಮಾಡಿದ ಜಮೀನು 85.07 ಎಕರೆ ಮತ್ತು ವಿವಿಧ ಇಲಾಖೆ/ ಸಂಸ್ಥೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೀಡಲಾದ ಜಮೀನು 58.37 ಎಕರೆಗಳು ವಿವರಗಳು ಕೆಳಗಿನಂತಿದೆ. ಪ್ರಸ್ತುತ ಉಳಿಕೆ 165.19 ಎಕರೆ ಜಮೀನು ನಿರಾಶ್ರಿತರ ಪರಿಹಾರ ಕೇಂದ್ರದ ಅಧೀನದಲ್ಲಿರುತ್ತದೆ.
<table>
<tr><th>ಸಂಘ ಸಂಸ್ಥೆ</th><th>ಗುತ್ತಿಗೆ ನೀಡಲಾದ ಜಮೀನಿನ ವಿಸ್ತೀರ್ಣ (ಎಕರೆ/ ಗುಂಟೆಗಳಲ್ಲಿ</th><th>ವಾರ್ಷಿಕ ಎಕರೆಗೆ ನಿಗದಿಪಡಿಸಿರುವ ಹಣ</th></tr>
<tr><td>ಸುಮನಹಳ್ಳಿ, ಕುಷ್ಠರೋಗಿಗಳ ಪುನರ್ ವಸತಿ ಕೇಂದ್ರ,</td><td>43.19</td><td>ಸರ್ಕಾರವು ಅನುಮೋದಿಸಿದ ದರದಂತೆ ವಾರ್ಷಿಕ ಎಕರೆ ಒಂದಕ್ಕೆ ರೂ.1000/-ದಂತೆ 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿದೆ.</td></tr>
<tr><td>ನಾಡ ಪ್ರಭು ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರ</td><td>5.00</td><td>ಸರ್ಕಾರವು ಅನುಮೋದಿಸಿದ ದರದಂತೆ ವಾರ್ಷಿಕ ಎಕರೆ ಒಂದಕ್ಕೆ ರೂ.1000/-ದಂತೆ 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿದೆ.</td></tr>
<tr><td>ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ</td><td>4.18</td><td>ಸರ್ಕಾರವು ಅನುಮೋದಿಸಿದ ದರದಂತೆ 99 ವರ್ಷ ಲೀಸ್ ಆಧಾರದ ಮೇಲೆ ನೀಡಲಾಗಿದೆ.</td></tr>
<tr><td>ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ</td><td>4.00</td><td>ವಾರ್ಷಿಕ ಎಕರೆ ಒಂದಕ್ಕೆ ರೂ.10,000/- ಗಳಂತೆ 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿದೆ.</td></tr>
<tr><td>ಬೆಂಗಳೂರು ಮಹಾನಗರ ಪಾಲಿಕೆ (ವಿದ್ಯುತ್ ಚಿತಾಗಾರ ನಿರ್ಮಿಸಲು)</td><td>2.00</td><td>ವಾರ್ಷಿಕ ಎಕರೆ ಒಂದಕ್ಕೆ ರೂ.100/- ಗಳಂತೆ 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿದೆ.</td></tr>
</table>
ಸದರಿ ಜಮೀನಿನಲ್ಲಿ ಕರ್ನಾಟಕ ಭಿಕ್ಷಾಟನಾ ಅಧಿನಿಯಮ ಹಾಗೂ ನಿಯಮ 1975 ರಡಿ ನಿರಾಶ್ರಿತರಿಗೆ ರಕ್ಷಣೆ ಒದಗಿಸಿ ವೃತ್ತಿಪರ ತರಬೇತಿಗಳಾದ ಕೃಷಿ ಮತ್ತು ತೋಟಗಾರಿಕೆ, ಹೈನುಗಾರಿಕೆ, ಕುರಿ-ಮೇಕೆ ಸಾಕಾಣಿಕೆ, ಕಾಯರ್ ಮ್ಯಾಟ್, ಗೃಹೋಪಯೋಗಿ ಉತ್ಪನ್ನಗಳು, ಸಿದ್ಧಉಡುಪು, ಕೈಮಗ್ಗ, ವಿದ್ಯುತ್ ಮಗ್ಗ ಮತ್ತು ಬೈಂಡಿಂಗ್ ತಯಾರಿಸುವಂತಹ ತರಬೇತಿಗಳನ್ನು ನೀಡುವ ಮೂಲಕ ಪುನಃ ಭಿಕ್ಷಾಟನೆಗೆ ಹೋಗದಂತೆ ಮನಪರಿವರ್ತನೆ ಮಾಡಿ ಸ್ವಾವಲಂಬಿಗಳನ್ನಾಗಿ ಮಾಡಲಾಗುತ್ತಿದೆ.</td>
</tr>
</table>

| | | |
|---|---|---|
| ಆ) | ಗುತ್ತಿಗೆ ಪಡೆದುಕೊಂಡ ಸಂಸ್ಥೆಯವರು ಎಷ್ಟು ವಿಸ್ತೀರ್ಣ ಪ್ರದೇಶದಲ್ಲಿ ತಮ್ಮ ಕಾರ್ಯಚಟುವಟಿಕೆ ಮಾಡುತ್ತಿದ್ದಾರೆ ಹಾಗೂ ಅವುಗಳು ಯಾವುವು; ಉಳಿದಂತಹ ಜಾಗದಲ್ಲಿ ನಡೆಯುತ್ತಿರುವ ಚಟುವಟಿಕೆಗಳೇನು; | ಗುತ್ತಿಗೆ ಪಡೆದುಕೊಂಡಿರುವ ಸುಮ್ಮನಹಳ್ಳಿ ಕುಷ್ಠರೋಗಿಗಳ ಪುನರ್ ವಸತಿ ಕೇಂದ್ರದಲ್ಲಿನ ಭಾಗಶ: ಜಾಗವನ್ನು ಬಿ.ಬಿ.ಎಂ.ಪಿ.ಯವರು ಒತ್ತುವರಿ ಮಾಡಿಕೊಂಡು ಶಾಲೆ ಆಸ್ಪತ್ರೆ ನಿರ್ಮಿಸುತ್ತಿದ್ದಾರೆ.<br><br>ಉಳಿದಂತೆ ಇತರೆ ಸಂಸ್ಥೆಗಳಿಗೆ ನೀಡಿರುವ ಗುತ್ತಿಗೆ ನೀಡಲಾದ ಜಾಗವನ್ನು ಆಯಾ ಸಂಸ್ಥೆಯವರು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡಿದ್ದಾರೆ. |
| ಇ) | ಜಮೀನನ್ನು ಗುತ್ತಿಗೆ ನೀಡುವಾಗ ಸರ್ಕಾರ ವಿಧಿಸಿರುವ ನೀತಿ-ನಿಯಮಗಳನ್ನು ಪಾಲಿಸದೆ ಉಲ್ಲಂಘನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಅನುಮತಿ ಪಡೆದು ವಿವಿಧ ಇಲಾಖೆ/ ಸಂಸ್ಥೆಗಳಿಗೆ ಗುತ್ತಿಗೆ ನೀಡಲಾಗಿದೆ. ಸುಮನಹಳ್ಳಿ ಕುಷ್ಠರೋಗಿಗಳ ಪುನರ್‌ವಸತಿ ಕೇಂದ್ರವನ್ನು ಹೊರತುಪಡಿಸಿ ಇತರೆ ಯಾವುದೇ ಸಂಸ್ಥೆಯವರು ನಿಯಮ ಉಲ್ಲಂಘನೆಯನ್ನು ಮಾಡಿರುವುದಿಲ್ಲ.<br><br>ಸುಮನಹಳ್ಳಿ ಕುಷ್ಠರೋಗಿಗಳ ಪುನರ್ ವಸತಿ ಕೇಂದ್ರಕ್ಕೆ ನೀಡಲಾದ ಗುತ್ತಿಗೆ ಜಮೀನನ್ನು ಬಿ.ಬಿ.ಎಂ.ಪಿ. ಯವರು ಅತಿಕ್ರಮಣ ಮಾಡಿ ಶಾಲೆ, ಆಸ್ಪತ್ರೆ ತ್ಯಾಜ್ಯ ಘಟಕ ಹಾಗೂ ಇತರೆ ಕಟ್ಟಡಗಳನ್ನು ನಿರ್ಮಿಸುತ್ತಿದ್ದಾರೆ. ಈ ಬಗ್ಗೆ ಘನ ನ್ಯಾಯಾಲಯದಲ್ಲಿ ಸುಮನಹಳ್ಳಿ ಕುಷ್ಠ ರೋಗಿಗಳ ಪುನರ್ ವಸತಿ ಕೇಂದ್ರವು ತಡೆಯಾಜ್ಞೆ ತಂದಿರುತ್ತಾರೆ. |
| ಈ) | ಬಂದಿದ್ದಲ್ಲಿ, ಈ ಸಂಸ್ಥೆಯ ವಿರುದ್ಧ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು; ಇದರ ಜವಾಬ್ದಾರಿವಹಿಸಿಕೊಂಡಿರುವಂತಹ ಅಧಿಕಾರಿಗಳು ಯಾರು; ಅಂತಹ ಅಧಿಕಾರಿಗಳ ಮೇಲೆ ಯಾವುದಾದರೂ ಶಿಸ್ತು ಕ್ರಮ ತೆಗೆದುಕೊಳ್ಳಲಾಗಿದೆಯೇ; | ಬೆಂಗಳೂರು ನಿರಾಶ್ರಿತರ ಪರಿಹಾರ ಕೇಂದ್ರದ ವತಿಯಿಂದ ಅತಿಕ್ರಮದ ಬಗ್ಗೆ ಕಾಲಕಾಲಕ್ಕೆ ನೋಟಿಸ್ ಜಾರಿ ಮಾಡಿ ಸದರಿ ಅತಿಕ್ರಮದ ಕಟ್ಟಡಗಳು ನಿರ್ಮಾಣ ಮಾಡದಂತೆ ನ್ಯಾಯಾಲಯದಿಂದ ತಡೆಯಾಜ್ಞೆ ಇರುತ್ತದೆ.<br><br>ಬೆಂಗಳೂರು ನಿರಾಶ್ರಿತರ ಪರಿಹಾರ ಕೇಂದ್ರದಿಂದ ನಿಯಮ ಉಲ್ಲಂಘನೆ ಬಗ್ಗೆ ಪರಿವೀಕ್ಷಣೆ ಮಾಡಿ ಕಾಲಕಾಲಕ್ಕೆ ವರದಿ ಸಲ್ಲಿಸಿರುವುದರಿಂದ ಶಿಸ್ತು ಕ್ರಮದ ಪ್ರಕರಣಗಳು ಕಂಡುಬಂದಿರುವುದಿಲ್ಲ. |
| ಉ) | ಸರ್ಕಾರದ ಜಮೀನನ್ನು ಸರ್ಕಾರದ ಕಾರ್ಯಚಟುವಟಿಕೆಗಳಿಗೆ ಉಪಯೋಗಿಸಿಕೊಳ್ಳುವುದನ್ನು ಬಿಟ್ಟು ಈ ರೀತಿ ಗುತ್ತಿಗೆ ನೀಡುವ ಅನಿವಾರ್ಯತೆಯ ಉದ್ದೇಶಗಳೇನು? | ಸರ್ಕಾರವು ಕಾಲಕಾಲಕ್ಕೆ ನೀಡುವ ನಿರ್ದೇಶನ ಹಾಗೂ ಆದೇಶದಂತೆ ವಿವಿಧ ಇಲಾಖೆ ಮತ್ತು ಸಂಸ್ಥೆಗಳಿಗೆ ಗುತ್ತಿಗೆ ನೀಡಲಾಗಿದೆ. |

**No: SWD/20/SBR/2024**

**(ಡಾ||ಹೆಚ್.ಸಿ.ಮಹದೇವಪ್ಪ)**
ಸಮಾಜ ಕಲ್ಯಾಣ ಸಚಿವರು.